<u>ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>

ಸಿ.ಸಿ.ನಂಃ 228/2018 ಸಿ.ಡಬ್ಲ್ಯೂ –15 ಪಿ.ಡಬ್ಲ್ಯೂ -10

| | | |
|---|---|---|
| ಹೆಸರು | ಃ | ರಾಜಕುಮಾರ |
| ತಂದೆಃ ಗಂಡ | ಃ | ಅಣ್ಣಪ್ಪ |
| ವಯಸ್ಸು | ಃ | ೩೮ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಕೊರಳ್ಳಿ |

ದಿನಾಂಕಃ೧೪.೧೨.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

<u>ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದ ಃ</u>

ಆರೋಪಿ ಪರಿಚಯ ಇರುತ್ತದೆ. ಮೃತ ಅಣ್ಣಪ್ಪ ನನ್ನ ತಂದೆ ಆಗಬೇಕು, ಈಗ ಅವರ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ಚಾಸಾ-೬ ನನ್ನ ತಾಯಿ, ಚಾಸಾ-೮ ನನ್ನ ತಮ್ಮ, ಚಾಸಾ-೭ ನನ್ನ ಚಿಕ್ಕಪ್ಪ, ಚಾಸಾ-೧೪ ನನ್ನ ಚಿಕ್ಕಪ್ಪನ ಮಗ, ಚಾಸಾ-೧ ರಿಂದ ೫, ೯ ರಿಂದ ೧೩ ರವರ ಪರಿಚಯ ಇರುತ್ತದೆ.

ಚಾಸಾ-೧ ಮತ್ತು ೬ ರವರು ಆಸ್ಪತ್ರೆಗೆ ಮೋಟರ್ ಸೈಕಲ ಮೇಲೆ ಹೊರಟಿರುವಾಗ ಭುಸನೂರ ಫ್ಯಾಕ್ಟರಿ ಹತ್ತಿರ ಆರೊಪಿ ತನ್ನ ವಾಹನವನ್ನು ತೆಗೆದುಕೊಂಡು ಬಂದು ಅಪಘಾತಪಡಿಸಿ ಸ್ಥಳದಿಂದ ಓಡಿ ಹೊಗಿರುತ್ತಾನೆ, ನಂತರ ನಾವು ನನ್ನ ತಂದೆ ತಾಯಿಯವರನ್ನು (ಚಾಸಾ-೧ ಮತ್ತು ೬) ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದೆವು. ಬಸವೇಶ್ವರ ಆಸ್ಪತ್ರೆಯ ವೈದ್ಯರು ಬಾಬಾ ಹೌಸ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಬಾಬಾ ಹೌಸ್ ಆಸ್ಪತ್ರೆಯಲ್ಲಿ ಎರಡು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡರು, ನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಅಂಬುಲೆನ್ಸ ಮೂಲಕ ಕರೆದುಕೊಂಡು ಹೋದೆವು. ಅಲ್ಲಿ ನನ್ನ ತಂದೆ ಚಿಕಿತ್ಸೆ ಫಲಿಸದೇ ಬೆಳಗಿನ ಜಾವ 4.00 ಗಂಟೆಗೆ ಮೃತರಾಗಿರುತ್ತಾರೆ. ನಂತರ ನಮ್ಮ ತಂದೆಯವರ ಮೃತದೇಹವನ್ನು ಸರಕಾರಿ ಗುಲಬರ್ಗಾ ಆಸ್ಪತ್ರೆಗೆ ತೆಗೆದುಕೊಂಡು ಬಂದೆವು, ಅಲ್ಲಿ ಪಂಚನಾಮೆಯನ್ನು ಜರುಗಿಸಿ ನಂತರ ಶವಸಂಸ್ಕಾರವನ್ನು ಮಾಡಿರುತ್ತೇವೆ. ಚಾಸಾ-೬ ರವರು ಸಹ ಕೂಡ ಸದರಿ ಅಪಘಾತದಿಂದ ತೀವ್ರ ಸ್ವರೂಪದ ಗಾಯಗಳನ್ನು ಹೊಂದಿದ್ದರು, ಅವರಿಗೂ ಸಹ ಕೈ, ಕಾಲು ಮೆದುಳಿಗೂ ತೀವ್ರ ಸ್ವರೂಪದ ಗಾಯಗಳಾಗಿದ್ದವು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**<u>ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.</u>**

ಅಪಘಾತವು ದಿ, ೨೯.೧೦.೨೦೧೭ ರಂದು ಆಗಿರುತ್ತದೆ ಎಂಥರೆ ಸರಿ. ನಮ್ಮ ತಂದೆಯವರ ಮೋಟರ್ ಸೈಕಲ ನಂ. ಕೆ.ಎ ೩೨-ಇಎಲ್-೦೫೩೪ ನ್ನು ಚಲಾಯಿಸಿಕೊಂಡು ಹೋಗುತ್ತಿದ್ದರು ಎಂದರೆ ಸರಿ. ಭುಸನೂರ ಕಡೆಯಿಂದ ಬಂದ ಜಿಪ್ ನಂ. ಎಂ.ಹೆಚ್.-೧೨-ಬಿಜಿ-೭೦೮೫ ಎಂದರೆ ಸರಿ. ಸದರಿ ಜೀಪನ ಚಾಲಕನು ಅತಿಜೋರಾಗಿ ನಿರ್ಲಕ್ಷತನದಿಂದ ಬಂದು ಚಾಸಾ-೧ ರವರು ಚಲಾಯಿಸಿಕೊಂಡು ಹೋಗುತ್ತಿರುವ ಮೋಟರ್ ಸೈಕಲಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿ. ಸದರಿ ಅಪಘಾತದಿಂದ ಚಾಸಾ-೧ ರವರಿಗೆ ಬಲಗಾಲು, ಬಲಗೈ, ಭಾರಿ ರಕ್ತಗಾಯ ಹಾಗು ಭಾರಿ ಗುಪ್ತಗಾಯಗಳಾಗಿದ್ದವು ಎಂದರೆ ಸರಿ. ಚಾಸಾ-೬ ರವರಿಗೆ ಬಲಗೈ ಮುಂಡಿ ಹಾಗೂ ಎದೆಗೆ ಭಾರಿ ಗಾಯಗಳು ಮತ್ತು ಎರಡು ಕಾಲುಗಳಿಗೆ ತರಚಿದ ಗಾಯಗಳಾಗಿದ್ದವು ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಎ.ಡಬ್ಲು.ಎ. ವಕೀಲರಿಂದ</u>**

ದಿ.೨೯.೧೦.೨೦೧೭ ರಂದು ನಾನು ಗುಲಬರ್ಗಾದಲ್ಲಿದ್ದೆನು. ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಗುಲಬರ್ಗಾದಲ್ಲಿ ಇದ್ದೆನು. ನಮ್ಮ ಊರಿನಿಂದ ಘಟನೆ ನಡೆದ ಸ್ಥಳ ೧-೧.೫ ಕಿ.ಮೀ. ಆಗುತ್ತದೆ. ಚಾಸಾ-೧ ರವರು ಚಲಾಯಿಸಿಕೊಂಡು ಹೋದ ಮೋಟರ್ ಸೈಕಲ್ ಚಾಸಾ-೮ರವರ ಹೆಸರಿನಲ್ಲಿರುತ್ತದೆ. ಚಾಸಾ-೧ ರವರಿಗೆ ಮೋಟರ್ ಸೈಕಲ್ ಚಲಾಯಿಸಲು ಬರುತ್ತಿರಲಿಲ್ಲ ಎಂಥರೆ ಸರಿ ಅಲ್ಲ. ಚಾಸಾ-೧ ರವರಿಗೆ ಮೋಟರ್ ಸೈಕಲ್ ಚಲಾಯಿಸುವ ಪರವಾನಿಗೆ ಇರಲಿಲ್ಲ ಎಂದರೆ ಸರಿ ಅಲ್ಲ. ಪೋಲಿಸರು ನನಗೆ ಭೇಟಿ ಆಗಿರುವುದಿಲ್ಲ. ಚಾಸಾ-೬ ರವರಿಗೆ ಉರಿ ಚಳಿಯ ಸಲುವಾಗಿ ಚಾಸಾ-೧ ರವರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರು. ಕೊರಳ್ಳಿ ಗ್ರಾಮದಲ್ಲಿ ಸರಕಾರಿ ಆಸ್ಪತ್ರೆ ಇದೆ ಎಂದರೆ ಸರಿ. ಚಾಸಾ-೧ ಮತ್ತು ೬ ರವರು ೪.೩೦ ರಿಂದ ೫.೦೦ ಗಂಟೆ ಸುಮಾರಿಗೆ ಮನೆಯನ್ನು ಬಿಟ್ಟು ಭೂಸನೂರ ಕಡೆಗೆ ಹೊರಟಿರುತ್ತಾರೆ. ನಮ್ಮ ಊರಿನಿಂದ ಘಟನಾ ಸ್ಥಳಕ್ಕೆ ಹೋಗಬೇಕಾದರೆ ಕೇವಲ ೧೦ ನಿಮಿಷ ಬೇಕಾಗುತ್ತದೆ ಎಂಥರೆ ಸರಿ. ಘಟನೆ ಕುರಿತು ನನಗೆ ಚಾಸಾ-೧೩ ರವರು ಘಟನೆ ಆದ ದಿನದಂದೇ ತಿಳಿಸಿರುತ್ತಾರೆ. ಚಾಸಾ-೧೩ ರವರು ನನ್ನ ಅಣ್ಣ ತಮಕಿಯವರಾಗಬೇಕು. ಚಾಸಾ-೧೩ ರವರು ಘಟನೆ ಬಗ್ಗೆ ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ಸದರಿ ನಂಬರ್ ಹೇಳಲು ಬರುತ್ತದೆಯಾ ಎಂಥರೆ ಸಾಕ್ಷಿ ಮೊಬೈಲನಲ್ಲಿ ಸೇವ್ ಇದೆ ಎಂದು ನುಡಿಯುತ್ತಾರೆ. ಸದರಿ ಚಾಸಾ-೧೩ ರವರು ಸುಮಾರು ೫.೩೦ ಗಂಟೆಗೆ ಹೇಳಿರುತ್ತಾರೆ. ಚಾಸಾ-೧೩ ರವರು ಘಟನಾ ನಡೆದ ಸ್ಥಳದಿಂದಲೇ ನಮಗೆ ಕರೆ ಮಾಡಿ ತಿಳಿಸಿರುತ್ತಾರೆ. ನಾನು ನೇರವಾಗಿ ಬಸವೇಶ್ವರ ಆಸ್ಪತ್ರೆಗೆ ೬.೦೦ ಗಂಟೆ ಸುಮಾರಿಗೆ ಹೋಗಿರುತ್ತೇನೆ. ಬಸವೇಶ್ವರ ಆಸ್ಪತ್ರೆಯಲ್ಲಿ ಯಾವ ವೈದ್ಯರಿಗೆ ತೊರಿಸಿದ್ದೀರಿ ಎಂದರೆ ಯಾವ ವೈದ್ಯರು ಚಿಕಿತ್ಸೆ ನಿಡಿದರು ಎಂದು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿಯು ಮುಂದುವರೆದು ಅಲ್ಲಿ ಅವರು ಹಿಡಿಯಲಿಲ್ಲ ಬಾಬಾ ಹೌಸ ಆಸ್ಪತ್ರೆಗೆ ಹೋಗಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಬಾಬಾ ಹೌಸ್ ಆಸ್ಪತ್ರೆ ಹೃದಯ ರೋಗ ತಜ್ಞರ ಆಸ್ಪತ್ರೆಗೆ ಎಂಥರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬಾಬಾ ಹೌಸ್ ಆಸ್ಪತ್ರೆಯ ಯಾವ ವಾರ್ಡಿನಲ್ಲಿ ಚಿಕಿತ್ಸೆ ಪಡೆದುಕೊಂಡರು ಎಂದರೆ ಸಾಕ್ಷಿ ಸ್ಪೇಷಲ್ ವಾರ್ಡಿನಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಅದರ ನಂಬರ್ ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

ಕೊರಳ್ಳಿ ಗ್ರಾಮದಿಂದ ಭುಸನೂರ ಗ್ರಾಮಕ್ಕೆ ಹೋಗಬೇಕಾದರೆ ರಸ್ತೆಯ ಎಡಬದಿಯಿಂದಲೇ ಹೋಗುತ್ತಾರೆ. ಭುಸನೂರಿಂದ ಕೊರಳ್ಳಿ ಗ್ರಾಮಕ್ಕೆ ಬರಬೇಕಾದರೆ ಎಡಬದಿಯಿಂದಲೇ ಬರುತ್ತಾರೆ ಎಂದು ನುಡಿಯುತ್ತಾರೆ. ಕೆನಾಲ್ ರಸ್ತೆಯ ಪಶ್ಚಿಮ ದಿಕ್ಕಿಗೆ ಇರುತ್ತದೆ. ಘಟನಾ ನಡೆದ ಸ್ಥಳಕ್ಕೆ ನಾನು ೮-೧೦ ದಿನಗಳ ನಂತರ ಹೋಗಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಟೂ ವೀಲರ್ ವಾಹನ ಮತ್ತು ಜೀಪ್ ಎರಡೂ ಇದ್ದವು. ಮೋಟರ್ ಸೈಕಲ್ ರಸ್ತೆಯ ಪಶ್ಚಿಮ ದಿಕ್ಕೆಗೆ ಬಿದ್ದಿತ್ತು, ಜೀಪ್ ಸಹ ಕೂಡ ರಸ್ತೆಯ ಪಶ್ಚಿಮ ದಿಕ್ಕಿಗೆ ಇತ್ತು. ಸದರಿ ಮೊಟರ್ ಸೈಕಲನ್ನು ಪೋಲಿಸರು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಮೋಟರ್ ಪೋಲಿಸರು ಎಷ್ಟು ದಿನಗಳ ಮೇಲೆ ತೆಗೆದುಕೊಂಡು ಬಂದರು ಎಂಥರೆ ಸಾಕ್ಷಿ ಒಂದು ತಿಂಗಳ ನಂತರ ತೆಗೆದುಕೊಂಡು ಬಂದರು ಎಂದು ನುಡಿಯುತ್ತಾರೆ. ಸದರಿ ಜೀಪನ್ನು ಯಾವಾಗ ತೆಗೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ.

ನಾನು ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂಥರೆ ಸರಿ ಅಲ್ಲ. ನಮ್ಮ ಊರ ಮುಂದೆ ಜೀಪನ್ನು ತೆಗೆದುಕೊಂಡು ಹೋಗುವುದನ್ನು ಮಾಡುವುದನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೊಪಿಯೇ ಅಪಘಾತ ಪಡಿಸಿದ್ದಾನೆ ಎಂದು ನನಗೆ ಯಾರೂ ತೊರಿಸಿರುವುದಿಲ್ಲ ಎಂದರೆ ಸರಿ ಅಲ್ಲ, ಚಾಸಾ-೧೨ ರಿಂದ ೧೪ ರವರು ನನಗೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-೧೨ ರಿಂದ ೧೪ ರವರು ಘಟನೆ ನಡೆದಿದೆ ಎಂದು ಹೇಳುವ ದಿನಾಂಕದಂದು ಊರಲ್ಲೇ ಇದ್ದರು. ಆರೋಪಿ ಅತಿ ಜೋರಾಗಿ ನಿರ್ಲಕ್ಷತನಿಂದ ಜೀಪನ್ನು ಚಾಲಾಯಿಸಿಕೊಂಡು ಬಂದು ಚಾಸಾ-೧ ರವರು ಚಲಾಯಿಸುತ್ತಿದ್ದ ಮೋಟರ್ ಸೈಕಲಗೆ ಡಿಕ್ಕಿಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಪರಿಹಾರ ಪಡೆದುಕೊಳ್ಳುವುದಕ್ಕೋಸ್ಕರ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿ ಅಲ್ಲ. ಘಟನೆಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ ಅಲ್ಲ.

ಚಾಸಾ-೧ ಮತ್ತು ೬ ರವರು ಆಸ್ಪತ್ರೆಗೆ ಮೋಟರ್ ಸೈಕಲ ಮೇಲೆ ಹೊರಟಿರುವಾಗ ಭುಸನೂರ ಫ್ಯಾಕ್ಟರಿ ಹತ್ತಿರ ಆರೊಪಿ ತನ್ನ ವಾಹನವನ್ನು ತೆಗೆದುಕೊಂಡು ಬಂದು ಅಪಘಾತಪಡಿಸಿ ಸ್ಥಳದಿಂದ ಓಡಿ ಹೊಗಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಂತರ ನಾವು ನನ್ನ ತಂದೆ ತಾಯಿಯವರನ್ನು (ಚಾಸಾ-೧ ಮತ್ತು ೬) ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಬಸವೇಶ್ವರ ಆಸ್ಪತ್ರೆಯ ವೈದ್ಯರು ಬಾಬಾ ಹೌಸ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ, ಬಾಬಾ ಹೌಸ್ ಆಸ್ಪತ್ರೆಯಲ್ಲಿ ಎರಡು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೬ ರವರು ಸಹ ಕೂಡ ಸದರಿ ಅಪಘಾತದಿಂದ ತೀವ್ರ ಸ್ವರೂಪದ ಗಾಯಗಳನ್ನು ಹೊಂದಿದ್ದರು, ಅವರಿಗೂ ಸಹ ಕೈ, ಕಾಲು ಮೆದುಳಿಗೂ ತೀವ್ರ ಸ್ವರೂಪದ ಗಾಯಗಳಾಗಿದ್ದವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಅಪಘಾತವು ದಿ, ೨೯.೧೦.೨೦೧೭ ರಂದು ಆಗಿರುತ್ತದೆ ಎಂಥರೆ ಸರಿ. ನಮ್ಮ ತಂದೆಯವರ ಮೋಟರ್ ಸೈಕಲ ನಂ. ಕೆ.ಎ ೩೨-ಇಎಲ್-೦೫೩೪ ನ್ನು ಚಲಾಯಿಸಿಕೊಂಡು ಹೋಗುತ್ತಿದ್ದರು ಎಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಭುಸನೂರ ಕಡೆಯಿಂದ ಬಂದ ಜೀಪ್ ನಂ. ಎಂ.ಹೆಚ್.-೧೨-ಬಿಜಿ-೭೦೮೫ ಎಂದರೆ ಸರಿ. ಸದರಿ ಜೀಪನ ಚಾಲಕನು ಅತಿಜೋರಾಗಿ ನಿರ್ಲಕ್ಷತನದಿಂದ ಬಂದು ಚಾಸಾ-೧ ರವರು ಚಲಾಯಿಸಿಕೊಂಡು ಹೋಗುತ್ತಿರುವ ಮೋಟರ್ ಸೈಕಲಿಗೆ ಡಿಕ್ಕಿಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸದರಿ ಅಪಘಾತದಿಂದ ಚಾಸಾ-೧ ರವರಿಗೆ ಬಲಗಾಲು, ಬಲಗೈ, ಭಾರಿ ರಕ್ತಗಾಯ ಹಾಗು ಭಾರಿ ಗುಪ್ತಗಾಯಗಳಾಗಿದ್ದವು, ಚಾಸಾ-೬ ರವರಿಗೆ ಬಲಗೈ ಮುಂಡಿ ಹಾಗೂ ಎದೆಗೆ ಭಾರಿ ಗಾಯಗಳು ಮತ್ತು ಎರಡು ಕಾಲುಗಳಿಗೆ ತರಚಿದ ಗಾಯಗಳಾಗಿದ್ದವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ